ವಿ.ಎಂ. ಪೈ, ಹೊನ್ನಾವರ
◆ ಕಳ್ಳನನ್ನು ನಂಬಿದರೂ ಕುಳ್ಳನನ್ನು ನಂಬಬಾರದು. ಏಕೆ?



ಕೀಳರಿಮೆಯನ್ನು ಮೆಟ್ಟಿ ನಿಲ್ಲಲು ನಂಬಲಾಗದಂತಹ ಸಾಧನೆಗಳನ್ನು ಮಾಡುವುದರಿಂದ.

ಮಲ್ಲಿಕಾರ್ಜುನ ಬಗಲಿ, ಜತ್ತ
◆ ಹೆಂಡದಂಗಡಿಯವನ ಮಗಳ ಕೈಯಲ್ಲಿ ಹಾಲಿನ ಪಾತ್ರೆಯಿದ್ದರೂ ಅದು ಹೆಂಡವೇ ಎಂದು ಜನ ಭಾವಿಸುವುದೇಕೆ?
ಬೆಳ್ಳಗಿರುವುದೆಲ್ಲ ಹಾಲಲ್ಲ ಎಂಬ ಗಾದೆಯನ್ನು ಬಲವಾಗಿ ನಂಬಿರುತ್ತಾರಲ್ಲ!

ಮುರಲೀಧರ ಕುಲಕರ್ಣಿ, ಬೀದರ್
◆ ಸಂಸಾರಸ್ಥರಿಗಿಂತ ಸನ್ಯಾಸಿಗಳಿಗೇ ಧನದ ದಾಹ ಹೆಚ್ಚಾಗಿರಲು ಕಾರಣವೇನು?
ಸನ್ಯಾಸಿಗೆ ಬೇಕೆನಿಸಿದ್ದನ್ನು ಒದಗಿಸಲು ಮಾವ ಇರುವುದಿಲ್ಲವಲ್ಲ.

ಅಮರಯ್ಯಾ ಪತ್ರಿಮಠ, ಸುರಪುರ
◆ ವಯಸ್ಸಾದಂತೆ ದೇಹ ಮಾಗುತ್ತದೆ. ಮನಸ್ಸು?



Wise ಆದಂತೆ ಮನಸ್ಸು ಮಾಗುತ್ತದೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
◆ ಒಳ್ಳೆಯ ಕೆಲಸಕ್ಕೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಅಪಶಕುನ. ಸುಂದರ ಹುಡುಗಿ ಅಡ್ಡ ಬಂದರೆ?
ಶಕುನವಲ್ಲ, ಲಗ್ನ; ಸುಸ್ಮಿತೆಯಾದರೆ ಕನ್ಯಾಲಗ್ನ; ಸಿಡುಕಿಯಾದರೆ ಕರ್ಕಾಟಕ ಲಗ್ನ; ಬಜಾರಿಯಾದರೆ ಸಿಂಹಲಗ್ನ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
◆ ಅಧಿಕಾರಕ್ಕಿಂತ ಮೊದಲು ಪ್ರಜೆಗಳೇ ಪ್ರಭುಗಳು ಎನ್ನುವವರು ಅಧಿಕಾರ ಸಿಕ್ಕಾಕ್ಷಣ ಮದಗಜಗಳಂತೆ ವರ್ತಿಸುವುದೇಕೆ?
ವೈರಸ್‌ಗಳೇ ಹಾಗೆ; ದೇಹ ಮೊದಲಿಗೆ ಅವಕ್ಕೆ ನೆಲೆ; ನಂತರ ಆಹಾರ.

ಪಿ.ಎನ್. ಶ್ರೀವತ್ಸ, ಬೆಂಗಳೂರು
◆ ಆಸ್ತಿಕರು ನಾಸ್ತಿಕರಾಗುವಷ್ಟು ಸುಲಭವಾಗಿ ನಾಸ್ತಿಕರು ಆಸ್ತಿಕರಾಗದಿರಲು ಕಾರಣ?
ಶಂಕೆಯ ಇಳಿಜಾರಿನಲ್ಲಿ ಹೋಗುವುದು ಸಾಕ್ಷಿಯ ದಿಬ್ಬ ಹತ್ತುವುದಕ್ಕಿಂತ ಸುಲಭವಾದ್ದರಿಂದ.

ವಿ. ಹಮೀದ್, ವಿಟ್ಲ
◆ ಪ್ರೇಮಿಗಳು ಅಪ್ಪಿ ಹಿಡಿದುಕೊಳ್ಳುವಾಗ ಕಣ್ಣು ಮುಚ್ಚಿಕೊಳ್ಳುತ್ತಾರೇಕೆ?
ಉಬ್ಬುಹಲ್ಲೋ, ಚೂಪುಮೂಗೋ ಕಣ್ಣುಗುಡ್ಡೆಗೆ ತಗುಲಿ ಪೆಟ್ಟಾಗದಿರಲೆಂದು ಮುನ್ನೆಚ್ಚರಿಕೆ.

ಕೆ.ಎಂ. ವಿಭೂತಿ, ಹರಿಹರ
◆ ನಿಮಗೆ ಮನೆಯೂಟ ಇಷ್ಟವೋ, ಹೋಟೆಲ್ ಊಟ ಇಷ್ಟವೋ, ಮದುವೆ ಊಟ ಇಷ್ಟವೋ?
ಅಂದು ಯಾವುದು ಸಿಗುವುದೋ ಅದನ್ನು ಬಿಟ್ಟು ಮಿಕ್ಕೆರಡೂ ಇಷ್ಟ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
◆ ಪದೇ ಪದೇ ಕೇಳಿದ್ದನ್ನೇ ಕೇಳಿದರೆ ಕೋಪ ಬರುತ್ತದಲ್ಲವೆ?
ಕೊಡಲಾಗದಿದ್ದರೆ ಮಾತ್ರ; ಮಗು ಮತ್ತೆ ಮತ್ತೆ ಮುತ್ತು ಕೇಳಿದರೆ ಕೋಪ ಬಾರದಲ್ಲ!

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು
◆ ಬೀಳ್ಕೊಟ್ಟರೂ ಬಿಡದೆ ಬರುವುದು ಯಾವುದು?
ನೆಗಡಿ, ಚಿಲ್ರೆಬುದ್ಧಿ, ಅನವಶ್ಯ ನೆನಪು...

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
◆ ಪ್ರತಿ ಚುನಾವಣೆಯಲ್ಲಿ ಮತ ಹಾಕಿದವನು ಇದ್ದಲ್ಲೇ ಇದ್ದಾನಲ್ಲಾ....?
ಸಾಕಿದ ನಾಯಿ ಧಣಿಯನ್ನೇ ಕಚ್ಚಲು ಬರುತ್ತದೆ; ಹೆದರಿದ ಧಣಿ ಇದ್ದಲ್ಲೇ; ನಾಯಿ ಊರೆಲ್ಲಾ ಅಲೆಯುತ್ತದೆ!

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ
◆ ಸಾಲ ಮಾಡಿ ತುಪ್ಪ ತಿನ್ನುವವರಿಗೂ, ಬ್ಯಾಂಕನ್ನೇ ಕಬಳಿಸುವವರಿಗೂ ವ್ಯತ್ಯಾಸವೇನು?
ಬ್ಯಾಂಕ್ ಕಬಳಿಸುವವರು ತುಪ್ಪ ತಿನ್ನುವುದಿಲ್ಲ, ಬೆಣ್ಣೆ ಹಚ್ಚುತ್ತಾರೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ದೇವರಿಗೂ, ಗುರುವಿಗೂ ವ್ಯತ್ಯಾಸವೇನು ಸಾರ್?
ದೇವರು ಸಿಲಬಸ್; ಗುರು ಗೈಡ್.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
◆ ತಾಳ್ಮೆಗೂ, ಕೋಪಕ್ಕೂ ಏನು ವ್ಯತ್ಯಾಸ?
ತಾಳ್ಮೆಯಿದ್ದಲ್ಲಿ ಜಾಣ್ಮೆ; ಕೋಪವಿದ್ದಲ್ಲಿ ಕೂಪ.

ಕುಮಾರ ಚಲವಾದಿ, ಹಾಸನ
◆ ನೀವೂ ತಪ್ಪು ಮಾಡಿ ಕ್ಷಮೆ ಯಾಚಿಸಿದ್ದೀರಾ?
ಮಾಡದೆಯೂ ಯಾಚಿಸಿದ್ದೇನೆ; ನನಗೆ ಮದುವೆಯಾಗಿದೆ.

ರಾಘವೇಂದ್ರ ಪಿ.ಜಿ., ಮೈಸೂರು
◆ ಹುಟ್ಟುಹಬ್ಬದ ನೆಪದಲ್ಲಿ ಕೇಕ್ ತೆಗೆದುಕೊಂಡು ಮುಖಕ್ಕೆ ಮೆತ್ತುವವರಿಗೆ ಏನೆನ್ನ ಬೇಕು?



ಕೇಕಪ್ ಆರ್ಟಿಸ್ಟ್.

ಮುರಲೀಧರ ಕೆ.
◆ ಸೇವೆ ಎಂಬ ಪದದ ಈಗಿನ ಕಾಲದ ಅರ್ಥವೇನು?
ಸೇವಿಸುವೆ ಎಂಬುದರ ಷಾರ್ಟ್ ಫಾರ್ಮ್.

ಭಾರತಿ ಮಾನಗೆ, ಹೊನ್ನಾವರ
◆ ಸುಖ ಮತ್ತು ದುಃಖದ ಸಮ್ಮಿಲನವೇ ಜೀವನ. ಏಕೆ?
ಪದದಲ್ಲೇ ಉತ್ತರವಿದೆ! ಜೀವವೇ ಸುಖ; ವನವೇ ದುಃಖ. ಸಮ್ಮಿಲನವೇ ಜೀವನ.

■ ರಾಮ್